ಶ್ರೀ ಪಿ.ಜಿ. ಆರ್. ಸಿಂಧ್ಯ.—ಹಾಗಾದರೆ ಮೂರು ಮತ್ತು ಎಂಟನೇ ತರಗತಿಗಳಿಗೆ ಪ್ರಿಂಟ್ ಆಗಿರ ತಕ್ಕಂಥ ಎಲ್ಲ ಪುಸ್ತಕಗಳು ಹೊಸ ಸಿಲಬಸ್ ಆಗಿದೆಯೋಅಥವಾ ಹಳೆಯಸಿಲಬಸ್ ಆಗಿದೆಯೋಎಂಬುದು ಒಂದು, ಎರಡನೆಯದಾಗಿ ಇನ್ನು ಎಷ್ಟು ದಿವಸಗಳಲ್ಲಿ ಪ್ರಿಂಟಿಂಗ್ ಕೆಲಸ ಮುಗಿಯುತ್ತದೆ ? ಮತ್ತು ಮುಖ್ಯವಾಗಿ ಪ್ರಿಂಟ್ ಆಗಿರತಕ್ಕಂಥ ಪುಸ್ತಕಗಳು ಸರಿಯಾಗಿ ವಿತರಣೆಯಾಗುತ್ತದೆಯೇ ಎಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಕೊನೆಪಕ್ಷ ಪರೀಕ್ಷೆಗೆ ೩೦ ದಿವಸಗಳ ಮುಂಚಿತವಾಗಿ ಈ ಪುಸ್ತಕ ಗಳನ್ನು ವಿತರಣೆ ಮಾಡಲಿಕ್ಕೆ ಸಾಧ್ಯವೇ ಎಂದು ಕೇಳುತ್ತೇನೆ?

ಶ್ರೀ ಕೆ. ಹೆಚ್. ರಂಗನಾಥ್.—ಮೂರು ಮತ್ತು ಎಂಟನೆ ತರಗತಿಗಳಿಗೆ ಹಳೇ ಸಿಲಬಸ್ ಪುಸ್ತಕ ಗಳನ್ನೇ ಕಳುಹಿಸಿಕೊಡಲಾಗುತ್ತದೆ. ಹೊಸ ಸಿಲಬಸ್ ಜಾರಿಗೊಳಿಸಿಲ್ಲ. ಆದ್ದರಿಂದ ಮಾನ್ಯ ಸದಸ್ಯರು ಇದರ ಬಗ್ಗೆ ಹೆಚ್ಚು ಕಳವಳವನ್ನು ಪಡಬೇಕಾಗಿಲ್ಲ. ಪುಸ್ತಕಗಳ ವಿಚಾರದಲ್ಲಿ ವ್ಯಾಪಕವಾಗಿ ಕಾರ್ಯ ಕ್ರಮವನ್ನು ಹಮ್ಮಿಕೊಂಡಿದ್ದೇವೆ. ಏತಕ್ಕೆಂದರೆ ಸರ್ಕಾರದವರು ಎರಡು ಪ್ರಿಂಟಿಂಗ್ ಪ್ರೆಸ್‌ಗಳಲ್ಲಿ ಅಂದರೆ ಮೈಸೂರು ಮತ್ತು ಬೆಂಗಳೂರು ಪ್ರಿಂಟಿಂಗ್ ಪ್ರೆಸ್‌ನಲ್ಲಿ ಮಾತ್ರ ಮೊದಲು ಪ್ರಿಂಟಿಂಗ್ ಆಗುತ್ತಿತ್ತು. ಆದರೆ ಈಗ ಎಲ್ಲ ಪ್ರಿಂಟಿಂಗ್ ಪ್ರೆಸ್‌ಗಳಲ್ಲಿ ಪ್ರಿಂಟ್ ಮಾಡಬೇಕೆಂದು ಆದೇಶ ಕೊಟ್ಟಿದ್ದೇವೆ. ಅದರ ಜೊತೆಗೆ ೮೫ ಖಾಸಗಿ ಪ್ರಿಂಟಿಂಗ್ ಪ್ರೆಸ್‌ಗಳಲ್ಲಿಯೂ ಕೂಡ ಪ್ರಿಂಟಿಂಗ್ ಮಾಡುವ ವ್ಯವಸ್ಥೆಯನ್ನು ಮಾಡಿದ್ದೇವೆ. ಮತ್ತೆ ಎರಡು ಸಾವಿರ ಟನ್ ಕಾಗದವನ್ನು ನಾವು ನೂರಕ್ಕೆ ನೂರು ಬೆಲೆಯನ್ನು ಕೊಟ್ಟು ಕೊಂಡುಕೊಳ್ಳತಕ್ಕಂಥ ವ್ಯವಸ್ಥೆ ಮಾಡಿದ್ದೇವೆ. ಮತ್ತೆ ಅರ್ಥ ಮಂತ್ರಿಗಳು ಅದಕ್ಕೆ ಹಣವನ್ನು ಬಿಡುಗಡೆ ಮಾಡಿದ್ದಾರೆ, ಎಂ.ಪಿ.ಎಂ. ನವರು ಏನು ಪೇಪರ್ ತಯಾರು ಮಾಡುತ್ತಾರೆ, ಅಲ್ಲಿಂದ ನೇರವಾಗಿ ಪ್ರಿಂಟಿಂಗ್ ಪ್ರೆಸ್‌ಗೆ ಬರುತ್ತದೆ, ಅಲ್ಲಿ ವಿತರಣೆ ಯಾಗುತ್ತದೆ. ಇದರಿಂದ ಮಾನ್ಯ ಸದಸ್ಯರ ಶಂಕೆ ಏನಿದೆ, ಪರೀಕ್ಷೆ ಇನ್ನು ೩೦ ದಿವಸ ಇದ್ದಾಗಲಾದರೂ ಪಠ್ಯ ಪುಸ್ತಕಗಳು ಹೊರಬರಲಿ ಎಂದು ಏನು ಹೇಳಿದ್ದಾರೆ, ಅದು ಬೇಡ. ನೀವು ಮತ್ತೆ ಈ ಪ್ರಶ್ನೆ ಯನ್ನು ಜುಲೈಯಲ್ಲಿ ಕೇಳುವುದಕ್ಕೆ ಅವಕಾಶ ಇಲ್ಲದ ಹಾಗೆ ನಾನು ವ್ಯವಸ್ಥೆ ಮಾಡುತ್ತೇನೆ, ನೀವು ಇದರ ಬಗ್ಗೆ ಜುಲೈಯಲ್ಲಿ ಪ್ರಶ್ನೆ ಕೇಳುವುದಕ್ಕೆ ಅವಕಾಶ ಆಗಬಾರದು, ಹಾಗೆ ವ್ಯವಸ್ಥೆ ಮಾಡಿಕೊಡುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಈ ಸದನ ಮುಗಿಯುವುದರೊಳಗಾಗಿ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳಿಗೂ ತಾವು ಕಳುಹಿಸಿಕೊಡುತ್ತೀರಾ ?

ಶ್ರೀ ಕೆ. ಹೆಚ್. ರಂಗನಾಥ್.—ಜುಲೈಯಲ್ಲಿ ಮಾನ್ಯ ಸದಸ್ಯರು ಪ್ರಶ್ನೆ ಕೇಳದೇ ಇರತಕ್ಕಂಥ ರೀತಿಯಲ್ಲಿ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಹಾಗಿದ್ದರೆ ತಮಗೆ ಕಂಗ್ರಾಜುಲೇಟ್ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಜುಲೈಯಲ್ಲಿ ಅಸೆಂಬ್ಲೀನೆ ಇರುವುದಿಲ್ಲವಲ್ಲ.

ಅಧ್ಯಕ್ಷರು.—ಮಾನ್ಯ ಕೆ. ಹೆಚ್. ರಂಗನಾಥ್ ಅವರು ಇಸವಿಯನ್ನೇ ಹೇಳಿಲ್ಲವಲ್ಲ.

ಅಧ್ಯಕ್ಷರು.—ಶ್ರೀ ಎ. ಟಿ. ರಾಮಸ್ವಾಮಿಯವರು ಗೈರುಹಾಜರಿ

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಕೊಳಚೆ ಪ್ರದೇಶ ಅಭಿವೃದ್ಧಿ ಯೋಜನೆಯಲ್ಲಿ ಅಭಿವೃದ್ಧಿಗೊಳಿಸಿದ ಕೊಳಚೆ ಪ್ರದೇಶಗಳು

೨೨. ಶ್ರೀ ಪೆರಿಕಲ್ ಎಂ. ಮಂಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದಲ್ಲಿರುವ ಕೊಳಚೆ ಪ್ರದೇಶಗಳ ಹೆಸರು.

೨ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯು ೧೯೮೮-೮೯ ಮತ್ತು ೧೯೮೯-೯೦ರಲ್ಲಿ ಚಿಕ್ಕಪೇಟೆ ವಿಧಾನಸಭೆ ಕ್ಷೇತ್ರದಲ್ಲಿ ಕೊಳಚೆ ಪ್ರದೇಶದ ಅಭಿವೃದ್ಧಿ ಯೋಜನೆಯಲ್ಲಿ ಅಭಿವೃದ್ಧಿಗೊಳಿಸಿದ ಕೊಳಚೆ ಪ್ರದೇಶಗಳ ಹೆಸರುಗಳೇನು ?

೩ ಕೊಳಚೆ ಪ್ರದೇಶದ ಅಭಿವೃದ್ಧಿ ಯೋಜನೆಯಲ್ಲಿ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಮೇಲಿನ ಕೊಳಚೆ ಪ್ರದೇಶಗಳಿಗೆ ೮೮-೮೯ ಮತ್ತು ೮೯-೯೦ರಲ್ಲಿ ಖರ್ಚು ಮಾಡಿದ ಹಣವೆಷ್ಟು ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

೧ ೦ ಅಶ್ವತ್ಥನಗರ ಮತ್ತು ಸಿದ್ಧಲಿಂಗನಗರ

೨ ನಾಗಮ್ಮನಗರ, ಬಿನ್ನಮಿಲ್ ಕ್ಯಾಂಟೀನ್ ಹತ್ತಿರ

೩ ಆಂಜನಪ್ಪ ಗಾರ್ಡನ್. ೨ನೇ ಹಂತ. ಬಿನ್ನಮಿಲ್ ಹತ್ತಿರ

೪ ಫ್ಲವರ್ ಗಾರ್ಡನ್, ಉತ್ತರ ಕಡೆ. ಆಂಜನಪ್ಪ ಗಾರ್ಡನ್ ಹತ್ತಿರ

೫ ಗಿರಿಪುರಂ, ಮೈಸೂರಂ ರಸ್ತೆ

೬ ಪೀರ್ ಬೌಂಡ್ರಿ. ಕಾಟನ್‌ಪೇಟೆ

೭ ಟಿಂಬರ್‌ಯಾರ್ಡ್ ಹತ್ತಿರ ಕಾಟನ್‌ಪೇಟೆ

೨ ೧೯೮೮-೮೯ ಮತ್ತು ೧೯೮೯-೯೦ರಲ್ಲಿ ಮಂಡಳಿಯು ವಿಧಾನಸಭಾ ಕ್ಷೇತ್ರದಲ್ಲಿ ಕೊಳಚೆ ಪ್ರದೇಶದ ಅಭಿವೃದ್ಧಿ ಯೋಜನೆಯಲ್ಲಿ ಯಾವ ಕೊಳಚೆ ಪ್ರದೇಶದ ಅಭಿವೃದ್ಧಿ ಕಾರ್ಯವನ್ನು ಕೈಗೊಂಡಿರುವುದಿಲ್ಲ. ಆದರೆ ೧೯೮೯-೯೦ರ ಸಾಲಿನಲ್ಲಿ ೫ ಕೊಳಚೆ ಪ್ರದೇಶಗಳಲ್ಲಿ ಸಣ್ಣ ಪುಟ್ಟ ಕೆಲಸಗಳನ್ನು ಕೈಗೊಳ್ಳಲಾಗಿದೆ. ಅವುಗಳೆಂದರೆ ನಾಗಮ್ಮನಗರ, ಆಂಜನಪ್ಪ ಗಾರ್ಡನ್ ಮತ್ತು ಗಿರಿಪುರಂ.

೩ ೧೯೮೮-೮೯ರಲ್ಲಿ ಮಂಡಳಿಯು ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಕೊಳಚೆ ಪ್ರದೇಶದ ಅಭಿವೃದ್ಧಿಗಾಗಿ ಯಾವ ಹಣವನ್ನು ಖರ್ಚು ಮಾಡಿರುವುದಿಲ್ಲ. ಆದರೆ ೧೯೮೯-೯೦ರ ಸಾಲಿನಲ್ಲಿ ರೂ. ೬೯,೦೦೦ ಗಳನ್ನು ಖರ್ಚು ಮಾಡಲಾಗಿದೆ.

ಶ್ರೀ ಪೆಂಕಲ್ ಎಂ. ಮಲ್ಲಪ್ಪ —ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಮೊದಲ ಪ್ರಶ್ನೆಗೆ ಏಳು ಕೊಳಚೆ ಪ್ರದೇಶಗಳು ಚಿಕ್ಕಪೇಟೆ ಕ್ಷೇತ್ರದಲ್ಲಿದೆ ಎಂದು ಹೇಳಿದ್ದಾರೆ. ಆದರೆ ನನಗೆ ಗೊತ್ತಿರುವ ಹಾಗೆ ೧೪ ಕೊಳಚೆ ಪ್ರದೇಶಗಳು ಚಿಕ್ಕಪೇಟೆ ಕ್ಷೇತ್ರದಲ್ಲಿದೆ. ನಾಲ್ಕು ಕೊಳಚೆ ಪ್ರದೇಶಗಳು ಮಾತ್ರ ಸ್ಲಮ್ಸ್ ಕ್ಲಿಯರೆನ್ಸ್ ಬೋರ್ಡ್‌ಗೆ ಬರುತ್ತದೆ. ಮತ್ತೆ ಎರಡನೇ ಪ್ರಶ್ನೆಗೆ ೧೯೮೮ನೇ ಇಸವಿಯಲ್ಲಿ ಈ ಏಳು ಕೊಳಚೆ ಪ್ರದೇಶಗಳಿಗೂ ಆವರು ಮೊದಲ ಎರಡು ವರ್ಷ ಏನೂ ಖರ್ಚು ಮಾಡಿಲ್ಲ ಎಂದು ಹೇಳಿದ್ದಾರೆ. ಕೊನೆಯ ೮೯-೯೦ನೇ ಸಾಲಿಗೆ ೬೯ ಸಾವಿರ ರೂಪಾಯಿ ಖರ್ಚು ಮಾಡಿದ್ದೇವೆ ಎಂದು ಹೇಳುತ್ತಾರೆ. ೩೦ ಸಾವಿರ ಜನ ಇರತಕ್ಕಂಥ ಚಿಕ್ಕಪೇಟೆ ಕೊಳಚೆ ಪ್ರದೇಶದಲ್ಲಿ ಇವರು ಮೂರೂ ವರ್ಷಕ್ಕೆ ಕೇವಲ ೬೯ ಸಾವಿರ ರೂಪಾಯಿಯನ್ನು ಖರ್ಚು ಮಾಡಿದ್ದೇವೆ ಎಂದು ಹೇಳುತ್ತಾರೆ. ಇದರ ಇಂಪ್ಲಿಕೇಷನ್ ತರ್ಜಮೆಯಲ್ಲಿ ಬೋರ್‌ವೆಲ್ ಪೈಪ್ಡ್ ಮಾಡಿದ್ದೇವೆ ಎಂದು ಹೇಳಿದ್ದಾರೆ. ಆದೇ ಕನ್ನಡದಲ್ಲಿ ಬೋರ್‌ವೆಲ್ ವಿಚಾರ ಇಲ್ಲ. ಸಣ್ಣ ಪುಟ್ಟ ಕೆಲಸಗಳನ್ನು ನಾವು ಮಾಡಿದ್ದೇವೆ ಎಂದು ಹೇಳಿದಾರೆ. ಎರಡನೇ ಪ್ರಶ್ನೆ ಮತ್ತು ಮೂರನೇ ಪ್ರಶ್ನೆಗೆ ಉತ್ತರ ಕೊಟ್ಟಿರುವುದರಲ್ಲಿ ನೋಡಿದರೆ ಡಿಫರೆನ್ಸ್ ಆಫ್ ಓಪಿನಿಯನ್ ಬರುತ್ತದೆ. ಮತ್ತೆ ಈ ಕೊಳಚೆ ಪ್ರದೇಶಗಳು ಸುಮಾರು ೪೦ ವರ್ಷಗಳಿಂದ ಚಿಕ್ಕಪೇಟೆ ಕ್ಷೇತ್ರದಲ್ಲಿ ಬರುತ್ತದೆ. ಚಿಕ್ಕಪೇಟೆ ಕ್ಷೇತ್ರ ಎಂದರೆ ಬೆಂಗಳೂರಿನಂಥ ಮಹಾನಗರದಲ್ಲಿ ಅದೂ ಸಿಟಿ ಮಧ್ಯದಲ್ಲಿರತಕ್ಕಂಥ ಒಂದು ಕ್ಷೇತ್ರ, ಇಂಥ ಕ್ಷೇತ್ರದಲ್ಲಿ ಮೂವತ್ತು ಸಾವಿರ ಜನ ಕೊಳಚೆ ಪ್ರದೇಶದ ಒಳಗಡೆ ಹೋಗಬೇಕು ಎಂದರೆ ಅಲ್ಲಿ ನಾಯಿಗಳು ಮತ್ತು ಹಂದಿಗಳು ಕೂಡಾ ಜೀವಿಸಲು ಬಯಸುವುದಿಲ್ಲ. ಮೂಗು ಮುಚ್ಚಿಕೊಂಡು ಒಳಗೆ ಹೋಗಬೇಕಾಗುತ್ತದೆ. ಇಂಥ ಪರಿಸ್ಥಿತಿಯಲ್ಲಿ ಚಿಕ್ಕಪೇಟೆ ಕ್ಷೇತ್ರ ಇದೆ. ಚಿಕ್ಕಪೇಟೆ ಕೊಳಚೆ ಪ್ರದೇಶಗಳು ನಮಗೆ ಪ್ರಾಪರ್ಟಿಯಾಗಿ ಬಂದಾಗಿನಿಂದಲೂ ಅದೇ ಸ್ಥಿತಿ ಗತಿಯಲ್ಲಿ ಉಳಿದುಕೊಂಡು ಬಂದಿವೆ. ಆದಕ್ಕಾಗಿ ಸರ್ಕಾರದಲ್ಲಿ ಇದರ ಬಗ್ಗೆ ಈ ವರ್ಷವಾಗಲೀ ಅಥವಾ ಮುಂದಿನ ವರ್ಷದಲ್ಲಾಗಲೀ ಏನಾದರೂ ಇಂಪ್ರೂವ್‌ಮೆಂಟ್ ಮಾಡುವ ಉದ್ದೇಶವನ್ನು ಏನಾದರೂ ಇಟ್ಟಿದ್ದೀರಾ ಎಂದು ಕೇಳುತ್ತಿದ್ದೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೇ, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಸರ್ಕಾರದ ಮಾಹಿತಿಯಲ್ಲಿರತಕ್ಕಂಥದ್ದು ಏಳು ಕೊಳಚೆ ಪ್ರದೇಶಗಳನ್ನು ನಾವು ಐಡೆಂಟಿಫೈ ಮಾಡಿದ್ದೇವೆ. ಅದರಲ್ಲಿ ಸುಮಾರು ಆರು ಕೊಳಚೆ ಪ್ರದೇಶಗಳನ್ನು ಫೋಷಣೆ ಮಾಡಿದ್ದಾರೆ. ಈ ರೀತಿ ಫೋಷಣೆ ಮಾಡಿರುವ ಆರರ ಪೈಕಿಯಲ್ಲಿ ಮೂರು ಕೊಳಚೆ ಪ್ರದೇಶಗಳಿಗೆ ಸ್ವಲ್ಪ ಅಷ್ಟಿಷ್ಟು ಕನಿಷ್ಠ ಪ್ರಮಾಣದಲ್ಲಿ ಕೆಲವು ನಾಗರೀಕ ಸೌಲಭ್ಯಗಳನ್ನು ಕೊಡುವಂಥ ಪ್ರಯತ್ನವನ್ನು ಕೂಡಾ ಹಿಂದಿನ ಸರ್ಕಾರದವರು ಮಾಡಿದ್ದಾರೆ, ಆದರೆ ತಪ್ಪು ಕಳಕಳಿ ಏನು ಇದೆ, ಹೆಚ್ಚು ಕೊಳಚೆ ಪ್ರದೇಶಗಳು ಅಲ್ಲಿ ಇದೆ ಎಂದು ಹೇಳಿದ್ದೀರಿ, ಅದು ಯಾವಾಗ ಬಂದಿದೆ ಎಂದು ನನಗೆ ಗೊತ್ತಿಲ್ಲ, ಅಧಿಕೃತ ಪಟ್ಟಿಯಲ್ಲಿರತಕ್ಕಂಥ ಕೊಳಚೆ ಪ್ರದೇಶಗಳಿಗೆ ಕನಿಷ್ಠ ಪ್ರಮಾಣದಲ್ಲಿ ಕೊಡತಕ್ಕಂಥ ಕನಿಷ್ಠ ಸೌಲಭ್ಯಗಳನ್ನು ಅವರು ಇದುವರೆಗೂ ಏನು ಆದರಿಂದ ವಂಚಿತರಾಗಿದ್ದಾರೆ. ಅದನ್ನು ಈ ಸಾಲಿನಿಂದಲೇ

ಹೆಚ್ಚಿನ ಆದ್ಯತೆ ಮೇರೆಗೆ ತಮ್ಮ ಅನಿಸಿಕೆಯನ್ನು ಗಮನದಲ್ಲಿಟ್ಟುಕೊಂಡು ನಾಗರೀಕರಿಗೆ ಕನಿಷ್ಠ ಸೌಲಭ್ಯಗಳನ್ನು ಕೊಡತಕ್ಕಂಥ ಒಂದು ಯತ್ನ ಏನು ನಡೆದಿಲ್ಲ. ಅದನ್ನು ಕೊಡಲಿಕ್ಕೆ ಪ್ರಾಮಾಣಿಕ ವಾದಂಥ ಪ್ರಯತ್ನವನ್ನು ಮಾಡುತ್ತೇನೆಂದು ಮಾನ್ಯ ಸದಸ್ಯರಿಗೆ ಭರವಸೆಯನ್ನು ಕೊಡುತ್ತೇನೆ.

ಶ್ರೀ ಪರಿಕಲ್ ಎಂ. ಮಲ್ಲಪ್ಪ —ಮಾನ್ಯ ಅಧ್ಯಕ್ಷರೇ, ಈ ಕೊಳಚೆ ಪ್ರದೇಶಗಳು ಇದೇ ರೀತಿ ಯಾಷ ಸರ್ಕಾರ ಬಂದರೂ ಕೂಡಾ ಅದೇ ರೀತಿಯಲ್ಲಿ ಮುಂದುವರಿಯುತ್ತಿವೆ. ದಯವಿಟ್ಟು ನನ್ನ ಎರಡನೇ ಪ್ರಶ್ನೆಗೆ ಕೊಳಚೆ ಪ್ರದೇಶಗಳು ಸ್ಲಮ್ ಕ್ಲಿಯರೆನ್ಸ್ ಬೋರ್ಡ್‌ಗೆ ಬರುತ್ತವೆ ಎಂದು ಹೇಳಿದ್ದೀರಿ, ಸ್ಲಮ್ ಕ್ಲಿಯರೆನ್ಸ್ ಬೋರ್ಡ್‌ನವರು ಏನು ಕೆಲಸವನ್ನು ಮಾಡುತ್ತಿಲ್ಲ. ಅವರು ಕೇಳುವುದೇನೆಂದರೆ ಒಂದು ಕೋಟಿ ಎಪ್ಪತ್ತು ಲಕ್ಷ ರೂಪಾಯಿಗಳನ್ನು ಬಜೆಟ್‌ನಲ್ಲಿ ಅವರಿಗೆ ಕೊಟ್ಟಿದ್ದೀರಿ. ಅವರ ಸಂಬಳಕ್ಕಾಗಿಯೇ ಒಂದು ಕೋಟಿ ರೂಪಾಯಿ ಆಗುತ್ತದೆ. ಇನ್ನು ಎಪ್ಪತ್ತು ಲಕ್ಷ ರೂಪಾಯಿಗಳಲ್ಲಿ ಇಡೀ ಕರ್ನಾಟಕಕ್ಕಾಗಿ ಏನೂ ಕೆಲಸವನ್ನು ಮಾಡುತ್ತಿಲ್ಲ, ಇಲ್ಲದಿದ್ದರೆ ಸ್ಲಮ್ ಕ್ಲಿಯರೆನ್ಸ್ ಬೋರ್ಡ್‌ಗೆ ಸರಿಯಾಗಿ ಫಂಡ್ಸ್‌ನ್ನು ಕೊಟ್ಟು ನಡೆಸಿ, ಇಲ್ಲದಿದ್ದರೆ ಸ್ಲಮ್ ಕ್ಲಿಯರೆನ್ಸ್ ಬೋರ್ಡ್‌ನ್ನು ಕ್ಲೋಸ್ ಮಾಡಿ ಅಲ್ಲಿರುವ ಆಫೀಸಿಯಲ್ಸ್‌ನ್ನು ಬೇರೆ ಡಿಪಾರ್ಟ್‌ಮೆಂಟಿಗೆ ಅವರನ್ನು ತೆಗೆದುಕೊಂಡುಬಿಡಿ. ಕೊಳಚೆ ಪ್ರದೇಶಗಳು ಕೆಲವು ಕಾರ್ಪೊರೇಷನ್‌ಗೆ ಸೇರುತ್ತವೆ ಎಂದು ಹೇಳಿದರೆ, ಕಾರ್ಪೊರೇಷನ್‌ನವರು ಸ್ಲಮ್ ಕ್ಲಿಯರೆನ್ಸ್ ಬೋರ್ಡ್‌ಗೆ ಸೇರುತ್ತವೆ ಎಂದು ನಾವು ಅಲ್ಲಿ ಕೆಲಸವನ್ನು ಮಾಡುವುದಿಲ್ಲ ಎಂದು ಹೇಳುತ್ತಾರೆ. ಸ್ಲಮ್ ಕ್ಲಿಯರೆನ್ಸ್ ಬೋರ್ಡ್‌ನವರು ಅದು ಕಾರ್ಪೊರೇಷನ್‌ಗೆ ಸೇರುತ್ತದೆ, ನಾವು ಕೆಲಸ ಮಾಡುವುದಿಲ್ಲ ಎಂದು ಹೇಳುತ್ತಾರೆ. ಈ ರೀತಿ ಒಬ್ಬರಿಗೊಬ್ಬರು ಕೆಲಸವನ್ನು ಮಾಡದೇ ಕೊಳಚೆ ಪ್ರದೇಶಗಳು ಅದೇ ರೀತಿ ಉಳಿದಿದೆ. ಇದಕ್ಕಾಗಿ ತಾವೇನಾದರೂ ಒಂದು ವ್ಯವಸ್ಥೆಯನ್ನು ಮಾಡುತ್ತೀರಾ ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಬಹಳ ದೀರ್ಘ ವಾದಂಥ ಪ್ರಶ್ನೆಯನ್ನು ಕೇಳಿದ್ದಾರೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದಂತೆ, ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿದಂತೆ ಮತ್ತು ಕೊಳಚೆ ನಿರ್ಮೂಲನಾ ಮಂಡಲಿಗೆ ಸೇರಿದಂತೆ ಕೆಲವು ಕೊಳಚೆ ಪ್ರದೇಶಗಳು ಇವೆ. ಕೊಳಚೆ ನಿರ್ಮೂಲನಾ ಮಂಡಲಿ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಮಾನ ಸದಸ್ಯರು ಹೇಳಿದ್ದಾರೆ. ಸರಿಯಾಗಿ ಅದು ಕೆಲಸ ಮಾಡದಿದ್ದರೆ ಅದನ್ನು ಚುರುಕು ಗೊಳಿಸಿ ಅದು ಸರಿಯಾಗಿ ಕೆಲಸ ಮಾಡದಿದ್ದರೆ, ಅದನ್ನು ತರಾಟೆಗೆ ತೆಗೆದುಕೊಳ್ಳುತಕ್ಕಂಥ ಸಾಮರ್ಥ್ಯ ಸರ್ಕಾರಕ್ಕೆ ಇದೆ ಎಂಬ ಭರವಸೆಯನ್ನು ಈ ವರ್ಷದಿಂದ ನಾನು ತಮಗೆ ಕೊಡುತ್ತೇನೆ.

ಅಧ್ಯಕ್ಷರು...ಪ್ರಶ್ನೋತ್ತರ ಕಾಲ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಚುಕ್ಕೆಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ವಿ. ರಾಜಶೇಖರಮೂರ್ತಿ. (ಹಣಕಾಸು ಸಚಿವರು).— ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಆರನೆಯ ಪಟ್ಟಿಯ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ದಾವಣಗೆರೆ ನಗರಗದಲ್ಲಿ ನೀರಿನ ತೊಂದರೆ

೪೨೭. ಶ್ರೀ ವೈ. ಎಂ. ವೀರಣ್ಣ (ದಾವಣಗೆರೆ).— ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ದಾವಣಗೆರೆ ಮಹಾನಗರದಲ್ಲಿ ಕುಡಿಯುವ ನೀರಿನ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಬಂದಿದ್ದರೆ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಬಂದಿದೆ.